**ಓ ಎಸ್ 87/2024 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿಃ 06.04.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ರಿಂದ 5 ನೇ ಪ್ರತಿವಾದಿ ಪರ ಶ್ರೀ ಎಸ್ ಎಂ ಜಿ ವಕೀಲರಿಂದಃ**

ಸಾಕ್ಷ್ಯ ನುಡಿಯಲು ನನ್ನನ್ನು ವಾದಿ ಕರೆದುಕೊಂಡು ಬಂದಿದ್ದರು. ಮನೆಯನ್ನು ಮಾರಾಟ ಮಾಡಿರುವ ಕಾರಣ ಆ ಮನೆಯಲ್ಲಿ ವಾಸ ಇರುವ ಬಗ್ಗೆ ಸಾಕ್ಷ್ಯ ನುಡಿಯುವಂತೆ ಕರೆದಿರುವಂತೆ ಬಂದಿದ್ದೇನೆ. ವಾದಿಯು ಸಂಕಹಳ್ಳಿ ಜವರೇಗೌಡರ ಮನೆಯಲ್ಲಿ ವಾಸ ಇದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಅವರ ಗಂಡನ ಹೆಸರು ನನಗೆ ಗೊತ್ತಿಲ್ಲ. ವಾದಿಯ ತಾಯಿಯ ಹೆಸರು ಪಾರ್ವತಿ. ವಾದಿಯ ತಂದೆಯ ಹೆಸರು ನಾಗಣ್ಣ ಎಂದು ಹೇಳುತ್ತಾರೆ. ನನ್ನ ಅತ್ತೆಯಾ ನಾಗಣ್ಣರವರಿಂದ ನಿವೇಶನ ಖರೀದಿಸಿರುವ ಕಾರಣ ನನಗೆ ಅವರ ಬಗ್ಗೆ ಸ್ವಲ್ಪ ಗೊತ್ತಿದೆ. ನನ್ನ ಅತ್ತೆಯೂ ಎಂ. ವಿ. ನಾಗಣ್ಣ ನವರಿಂದ ನಿವೇಶನ ಖರೀದಿಸಿದ್ದಾರೆ. ನಾಗಣ್ಣ ನವರ ತಂದೆ ಹೆಸರು ವೇಕಟೇಗೌಡ. ನಾಗಣ್ಣನವರು ಮೇಲುಕೋಟೆಯವರು ಅವರಿಗೆ ಹೆಂಡತಿ ಮಕ್ಕಳು ಇದ್ದಾರೆ ಎಂದರೆ ಇರಬಹುದು. ನನ್ನ ಅತ್ತೆಯ ಗಂಡ ಮೇಲುಕೋಟೆ ಬಳಿಯ ಚಿಕ್ಕನಳ್ಳಿಯವರು ಎಂದರೆ ಸರಿ. ಎಂ. ವಿ. ನಾಗಣ್ಣನವರಿಂದ ನನ್ನ ಅತ್ತೆಯೂ ಖರೀದಿಸಿದ ನಿವೇಶನಕ್ಕೆ ಸಂಬಂಧಿಸಿದಂತೆ ವ್ಯಾಜ್ಯ ನಡೆಯಿತು ಎಂದರೆ ಸರಿಯಲ್ಲ. ಪಲ್ಲವಿ ಮತ್ತು ಅವರ ತಾಯಿ ನನಗೆ ಆತ್ಮೀಯರು ಎಂದರೆ ಸರಿ. ಅವರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಅವರು ವಾಸ ಮಾಡುವ ಮನೆಯ ಪೂರ್ವಕ್ಕೆ ಮನೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನನ್ನ ಹೆಂಡತಿ ಲಲಿತರವರ ಖಾಲಿ ನಿವೇಶನ ಮತ್ತು ಮನೆ ಇದೆ. ಈ ಚೆಕ್ಕುಬಂದಿಯೊಳಗಿನ ಮನೆಗೆ ಪಾರ್ವತಿಯವರು ಹೇಗೆ ಬಂದರು ನನಗೆ ಗೊತ್ತಿಲ್ಲ. ಎಂ.ವಿ.ನಾಗಣ್ಣನಿಗೂ ಆ ಮನೆಗೂ ಯಾವುದಾದರೂ ಸಂಬಂಧ ಇರುವ ಬಗ್ಗೆ ನಾನು ದಾಖಲೆ ನೋಡಿಲ್ಲ. ಎಂ.ವಿ.ನಾಗಣ್ಣನೂ ಪಾರ್ವತಿಯ ಗಂಡ ಮತ್ತು ವಾದಿಯ ತಂದೆ ಎಂದು ದಾಖಲೆಗಳಲ್ಲಿ ನಮೂದು ಆಗಿದೆ ಎಂದು ವಾದಿಯೂ ನನಗೆ ಹೇಳಿದ್ದಾರೆ, ಆದರೆ ನಾನು ನೋಡಿಲ್ಲ. ವಾದಿ ಹೇಳಿಕೆ ಮೇರೆಗೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಎಂದರೆ

ಸುಮಾರು 30 ವರ್ಷಗಳಿಂದ ಪಾರ್ವತಿಯವರು ಎಂ.ವಿ.ನಾಗಣ್ಣನನ್ನು ತನ್ನ ಗಂಡ ಎಂದು ವಾದಿಯು ತನ್ನ ತಂದೆ ಎಂದು ಹೇಳುತ್ತಿರುವುದರಿಂದ ನಾನು ಹೇಳುತ್ತಿದ್ದೇನೆ. ನನಗೆ ಖುದ್ದು ಮಾಹಿತಿ ಇಲ್ಲ. ನನ್ನ ಮುಖ್ಯವಿಚಾರಣೆಯ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಸಾಕ್ಷಿಯು ಮುಂದುವರೆದು ತಮಗೆ ಬರೆದುಕೊಟ್ಟಿರುವ ಕ್ರಯಪತ್ರದಲ್ಲಿ ಎಂ.ವಿ.ನಾಗಣ್ಣ ಎಂದು ಇದ್ದು, ವಾದಿಗಳ ದಾಖಲೆಗಳಲ್ಲಿ ನಾಗಣ್ಣ ಎಂದು ಇದೆ ಹೇಳುತ್ತಾರೆ. ಎಂ.ವಿ.ನಾಗಣ್ಣನವರಿಂದ ನಮ್ಮ ಅತ್ತೆಯು ನಿವೇಶನವನ್ನು ಕ್ರಯಕ್ಕೆ ಪಡೆದಿದ್ದಾರೆ. ಎಂ.ವಿ.ನಾಗಣ್ಣನವರು ಈಗ ಬದುಕಿಲ್ಲ. ಎಂ.ವಿ.ನಾಗಣ್ಣನ ಅಂತ್ಯ ಸಂಸ್ಕಾರವನ್ನು ಆತನ ಹೆಂಡತಿ ಕಮಲಮ್ಮ ಮತ್ತು ಮಕ್ಕಳು ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಪಾರ್ವತಿಯ ಗಂಡನ ಹೆಸರು ಮತ್ತು ವಾದಿಯ ತಂದೆಯ ಹೆಸರು ಎಂ.ವಿ.ನಾಗಣ್ಣ ನಾನು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರಿಕೆಯಲ್ಲಿ ಬರೆಸಿಲ್ಲ. ಹಾಗೇ ಬರೆಸಲು ಯಾವುದೇ ತೊಂದರೆ ಇರಲಿಲ್ಲ. ಎಂ.ವಿ.ನಾಗಣ್ಣ ಮತ್ತು ಪಾರ್ವತಿ ದಾಂಪತ್ಯ ಜೀವನ ನಡೆಸಿರುವ ಬಗ್ಗೆ ಮತ್ತು ವಾದಿಯು ಅವರಿಗೆ ಜನಿಸಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ನೋಡಿಲ್ಲ.

**ಪಾಟೀಸವಾಲು 8 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ**

**1 ರಿಂದ 5 ಪ್ರತಿವಾದಿಗಳ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಂಡು ಮುಂದುವರಿದ ಪಾಟೀಸವಾಲುಃ**

ನಮ್ಮ ಅತ್ತೆಯು 1991 ರಲ್ಲಿ ನಿವೇಶನ ಖರೀದಿ ಮಾಡಿದ್ದರು. ನಿವೇಶನವನ್ನು ಎಂ.ವಿ.ನಾಗಣ್ಣ ರವರಿಂದ ಖರೀದಿ ಮಾಡಿದ್ದರು. ವಾದಿಯ ತಾಯಿ ಸದರಿ ಕ್ರಯಪತ್ರದಲ್ಲಿ ಎಂ.ವಿ.ನಾಗಣ್ಣನ ಹೆಂಡತಿ ಎಂದು ಸಹಿ ಮಾಡಿದ್ದಾರೋ ಇಲ್ಲೋ ನನಗೆ ಗೊತ್ತಿಲ್ಲ. ನಮ್ಮ ಅತ್ತೆಯ ಕ್ರಯಪತ್ರವನ್ನು ನಾನು ನೋಡಿದ್ದೇನೆ. ನಿವೇಶನದ ವಿಸ್ತೀರ್ಣ 19 ಅಡಿ X 38 ಅಡಿ ಇದೆ. ಆ ನಿವೇಶನದ ಖಾತಾ ಸಂಖ್ಯೆ ನನಗೆ ಗೊತ್ತಿಲ್ಲ. ನಾಗಣ್ಣ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಪಾರ್ವತಿಯವರು ಏನು ಓದಿದ್ದಾರೆ ನನಗೆಗೊತ್ತಿಲ್ಲ. ವಾದಿಯ ಎಸ್ ಎಸ್ ಎಲ್ ಸಿ ಓದಿದ್ದಾರೆ. ನಾಗಣ್ಣನವರ ಮೂಲ ವಿಳಾಸ ಮತ್ತು ಅವರು ಯಾವಾಗ

ತೀರಿಕೊಂಡರು ಎಂದು ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಕಂದಾಯ ಇಲಾಖೆಯಿಂದ ವಂಶವೃಕ್ಷ ಪ್ರಮಾಣಪತ್ರ ನೀಡುವ ಸಂಗತಿ ನನಗೆ ಗೊತ್ತಿಲ್ಲ. ಕುಟುಂಬದ ಎಲ್ಲಾ ಸದಸ್ಯರ ಬಗ್ಗೆ ಮತ್ತು ಮೃತರ ಬಗ್ಗೆ ಮಾಹಿತಿ ಪಡೆದುಕೊಂಡು ಆರ್. ಐ. ಮತ್ತು ವಿ. ಎ. ರವರ ವರದಿ ಆಧಾರದ ಮೇರೆಗೆ ಆ ವರದಿ ನೀಡುತ್ತಾರೆಂದರೆ ಸರಿ. ಎಂ.ವಿ.ನಾಗಣ್ಣ ನವರ ವಂಶವೃಕ್ಷ ನಾನು ನೋಡಿಲ್ಲ. ಪಾರ್ವತಿಯವರು ಎಂ.ವಿ.ನಾಗಣ್ಣನವರ ಹೆಂಡತಿ ಅಲ್ಲ ಮತ್ತು ವಾದಿಯೂ ಎಂ.ವಿ.ನಾಗಣ್ಣನವರ ಮಗಳಲ್ಲ ಎಂದರೆ ಸರಿಯಲ್ಲ. ವಾದಿಯು ಎಲ್ಲಿ ಮದುವೆಯಾದರೂ ಎಂದರೆ ನನಗೆ ಗೊತ್ತಿಲ್ಲ ವಾದಿಯೂ ಹಿಂದೂ ಧರ್ಮದವಳಾಗಿದ್ದೂ ಆಕೆಯ ಗಂಡ ಕ್ರಿಶ್ಚಿಯನ್ ಧರ್ಮದವರಾಗಿರುತ್ತಾರೆ. ವಾದಿ ಮತ್ತು ವಾದಿಯ ಗಂಡ ಪಾಂಡವಪುರದ ವಿ.ಸಿ.ಕಾಲೋನಿಯಲ್ಲಿ ವಾಸ ಮಾಡುತ್ತಿದ್ದಾರೆಂದರೆ ಸರಿ. ಶಂ ಾತಿ ನಗರಕ್ಕೂ ಮತ್ತು ವಿ.ಸಿ. ಕಾಲೋನಿಗೂ ಒಂದೂವರೆ ಕಿ.ಮೀ. ಅಂತರವಿದೆ. ವಾದಿಯೂ ವಿ.ಸಿ.ಕಾಲೋನಿಯಲ್ಲಿ ಸುಮಾರು 3 ವರ್ಷಗಳಿಂದ ವಾಸ ಇದ್ದಾರೆ. ಎಂ.ವಿ.ನಾಗಣ್ಣನವರಿಗೆ ಎಷ್ಟು ಜನ ಹಂಡತಿಯರು ಮತ್ತು ಪಕ್ಕಳು ಎಂದು ನನ್ನ ಮುಖ್ಯವಿಚಾರಣೆಯ ಪತ್ರಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಎಂ.ವಿ.ನಾಗಣ್ಣನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಗೆ ಸಹಾಯ ಮಾಡುವ ಸಲುವಾಗಿ ಅವರು ಹೇಳಿದ ಹಾಗೇ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ಪಾಟೀಸವಾಲುಃ 6 ನೇ ಪ್ರತಿವಾದಿ ಪರ ಯಾವುದೇ ಕೋರಿಕೆ ಇಲ್ಲದಿರುವ ಕಾರಣ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಪಾಂಡವಪುರ